ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯವರು 1997-98 ನೇ ಸಾಲಿನಲ್ಲಿ ಬಡತನ ರೇಖೆ ಕೆಳಗಿನ ಕುಟುಂಬಗಳ ಬಗ್ಗೆ ನಡೆದ ಸಮೀಕ್ಷೆಯನ್ನು ಆಧರಿಸಿ ತಯಾರಿಸಿದ ಪಟ್ಟಿಯನ್ನು ಆಯಾ ಗ್ರಾಮದ ಗ್ರಾಮ ಸಭೆಗಳಲ್ಲಿ ಪರಿಶೀಲನೆಗೊಳಪಡಿಸಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರುತಿಸಲಾಗುತ್ತಿದೆ.

ಈ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರಿಂದ ನಡೆಸಿದ ಸಮೀಕ್ಷೆಯು ಕೆಲವು ಲೋಪದೋಷಗಳಿಂದ ಕೂಡದೆ ಎಂದು ಬಂದ ದೂರುಗಳ ಹಿನ್ನೆಲೆಯಲ್ಲಿ ಗ್ರಾಮ ಸಭೆಗಳಲ್ಲಿ ಸದರಿ ಸಮೀಕ್ಷೆ ಮೂಲಕ ಸಿದ್ಧಪಡಿಸಿದ ಪಟ್ಟಿಯಲ್ಲಿನ ಅರ್ಹ ಫಲಾನುಭವಿಗಳನ್ನು ಪರಿಶೀಲನೆಗೊಳಪಡಿಸಿ ಅರ್ಹ ಕುಟುಂಬಗಳನ್ನು ಗುರುತಿಸುವುದರ ಜೊತೆಗೆ ಪಟ್ಟಿಯಲ್ಲಿ ಇಲ್ಲದ, ಆದರೆ ಗ್ರಾಮಸಭೆಗಳ ಪ್ರಕಾರ ಅರ್ಹರೆಂದು ಕಂಡುಬಂದ ಫಲಾನುಭವಿಗಳ ಪಟ್ಟಿಯನ್ನೂ ಸಹ ಪ್ರತ್ಯೇಕವಾಗಿ ಸಿದ್ಧಪಡಿಸಲಾಗುತ್ತಿದೆ. ಈ ಪ್ರತ್ಯೇಕ ಪಟ್ಟಿಗೆ ಸಂಬಂಧಿಸಿದಂತೆ ಇಡೀ ರಾಜ್ಯದ ಮಾಹಿತಿ ಲಭ್ಯವಾದ ನಂತರ, ಈ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಕಟ್ಟೆಗಳು

2379(2820) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳೆಷ್ಟು? ಅಣೆಕಟ್ಟುಗಳು ಯಾವುವು, ಏಕಪ್‌ಗಳು ಯಾವುವು?

ಆ) ಕಳೆದ ಮೂರು ವರ್ಷಗಳಲ್ಲಿ ದುರಸ್ತಿಯಾದ ಕೆರೆಗಳಾವುವು? ಈ ಕೆರೆಗಳಲ್ಲಿ ಎಷ್ಟು ಅಣೆಕಟ್ಟು ಕಟ್ಟಲಾಯಿತು? ಏಕಪ್‌ಗಳು ಎಷ್ಟು ನಿರ್ಮಾಣ ಆಗಿವೆ;

ಇ) ಈ ವರ್ಷ ಜನರಿಂದ ಎಷ್ಟು ಕೆಲಸಕ್ಕೆ ಅರ್ಜಿ ಇದೆ.

ಈ) ಈ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಅಣೆಕಟ್ಟು ಮತ್ತು ಏಕಪ್‌ಗಳಿಗಾಗಿ ಇಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು?)

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳು-3 ಮತ್ತು ಅಣೆಕಟ್ಟು ಏಕಪ್‌ಗಳು-2, ಅವು ಯಾವುವೆಂದರೆ ಅಬೂಕನಹಳ್ಳಿ ಕೆರೆ, ಗೊಟ್ಟಿಕೆರೆ, ತುಯಿಲಹಳ್ಳಿ ಕೆರೆ ಹಾಗೂ ಪುರಅಣೆ ಹಾಗೂ ಡೊಂಕಿಹಳ್ಳಿ ಅಣೆ.

ಅ) ಕಳೆದ ಮೂರು ವರ್ಷಗಳಲ್ಲಿ ಮೇಲೆ ತಿಳಿಸಿರುವ ಮೂರು ಕೆರೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಹೊಸದಾಗಿ ಯಾವ ಅಣೆಕಟ್ಟು ಹಾಗೂ ಪಿಕಪ್‌ಗಳನ್ನು ನಿರ್ಮಿಸಲಾಗಿಲ್ಲ.

ಇ) ಈ ವರ್ಷ ತುರುವೇಕೆರೆ ತಾಲ್ಲೂಕಿನ ಗೊಟ್ಟಿಕೆರೆ ಹಿಂಡುಮಾರನಹಳ್ಳಿ ಹಾಗೂ ದಬ್ಬಿಘಟ್ಟ ಗ್ರಾಮಸ್ಥರು ಗೊಟ್ಟಿಕೆರೆ ಹಿಂಡುಮಾರನಹಳ್ಳಿ ರಸ್ತೆಯಲ್ಲಿ ಒಂದು ಸಂಪರ್ಕ ಸೇತುವೆಯನ್ನು ನಿರ್ಮಿಸಲು ಕೋರಿರುತ್ತಾರೆ.

ಈ) 2001-2002 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ``4702 ಸಣ್ಣ ನೀರಾವರಿ ಮೇಲಿನ ಬಂಡವಾಳ ವೆಚ್ಚ ಅಣೆಕಟ್ಟು, ಪಿಕಪ್ ಮತ್ತು ಬಂದಾರಗಳು-'' ಇದರಡಿಯಲ್ಲಿ ಈ ವಲಯದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಿಗೆ ಒಟ್ಟು 295.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

2001-2002ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ - "4702 ಸಣ್ಣ ನೀರಾವರಿ ಮೇಲಿನ ಬಂಡವಾಳ ವೆಚ್ಚ - ಅಣೆಕಟ್ಟು, ಪಿಕಪ್ ಮತ್ತು ಬಂದಾರಗಳು" ಇದರಡಿಯಲ್ಲಿ ಕೊಡಲಾಗಿರುವ ತಾಲ್ಲೂಕುವಾರು ಅನುದಾನ

ಕ್ರಮ ಸಂಖ್ಯೆ	ಜಿಲ್ಲೆ : ತಾಲ್ಲೂಕು	ಅನುದಾನ ಲಕ್ಷ ರೂ.ಗಳಲ್ಲಿ
1	2	3
	ಬೆಂಗಳೂರು ತಾಲ್ಲೂಕು	
1)	ಬೆಂಗಳೂರು ದಕ್ಷಿಣ ತಾಲ್ಲೂಕು	10.50
2)	ಚನ್ನಪಟ್ಟಣ ತಾಲ್ಲೂಕು	4.30
3)	ಕನಕಪುರ	2.20
4)	ನೆಲಮಂಗಲ	3.00
5)	ಆನೇಕಲ್	7.00
6)	ರಾಮನಗರ	3.00
	ಕೋಲಾರ ಜಿಲ್ಲೆ	
1)	ಬಂಗಾರಪೇಟೆ	7.00
2)	ಕೋಲಾರ ತಾಲ್ಲೂಕು	

1	2	3
3)	ಚಿಕ್ಕಬಳ್ಳಾಪುರ ತಾಲ್ಲೂಕು	1.00
4)	ಶಿಡ್ಲಘಟ್ಟ ತಾಲ್ಲೂಕು	6.20
5)	ಗೌರಿಬಿದನೂರು	5.00
6)	ಶ್ರೀನಿವಾಸಪುರ	4.80
7)	ಚಿಂತಾಮಣಿ	6.00
	ತುಮಕೂರು ಜಿಲ್ಲೆ	
1)	ಚಿಕ್ಕನಾಯಕನಹಳ್ಳಿ	6.00
2)	ಗುಬ್ಬಿ	10.00
3)	ಕೊರಟಗೆರೆ	2.90
4)	ಕುಣಿಗಲ್	1.00
5)	ಶಿರಾ	6.50
6)	ತುಮಕೂರು	1.90
7)	ಪಾವಗಡ	1.20
8)	ಮಧುಗಿರಿ	0.50
	ಚಿತ್ರದುರ್ಗ ಜಿಲ್ಲೆ	
1)	ಚಳ್ಳಕೆರೆ	4.20
2)	ಚಿತ್ರದುರ್ಗ	0.90
3)	ಹಿರಿಯೂರು	1.00
4)	ಹೊಸದುರ್ಗ	0.40
5)	ಮೊಳಕಾಲ್ಮೂರು	0.60
6)	ಹೊಳಲ್ಕೆರೆ	1.40
	ದಾವಣಗೆರೆ ಜಿಲ್ಲೆ	
1)	ಹೊನ್ನಾಳಿ	0.10
2)	ದಾವಣಗೆರೆ	1.20
3)	ಜಗಳೂರು	3.50
4)	ಚನ್ನಗಿರಿ	0.20

1	2	3
	ಶಿವಮೊಗ್ಗ ಜಿಲ್ಲೆ	
1)	ಸಾಗರ	6.50
2)	ಶಿಕಾರಿಪುರ	0.20
3)	ಶಿವಮೊಗ್ಗ	0.20
4)	ಸೊರಬ	14.90
5)	ಹೊಸನಗರ	4.70
	ಚಾಮರಾಜನಗರ ಜಿಲ್ಲೆ	
1)	ಕೊಳ್ಳೇಗಾಲ	6.00
	ಮೈಸೂರು	
1)	ಹೆಚ್.ಡಿ. ಕೋಟೆ	1.40
2)	ಹುಣಸೂರು	1.20
3)	ಮೈಸೂರು	2.40
	ಮಂಡ್ಯ ಜಿಲ್ಲೆ	
1)	ಮದ್ದೂರು	12.00
2)	ಮಳವಳ್ಳಿ	1.50
3)	ಪಾಂಡವಪುರ	2.00
4)	ಕೆ.ಆರ್. ಪೇಟೆ	2.00
5)	ನಾಗಮಂಗಲ	1.50
	ಹಾಸನ ಜಿಲ್ಲೆ	
1)	ಹಾಸನ	0.10
2)	ಆಲೂರು	1.30
3)	ಹೊಳೇನರಸೀಪುರ	8.10
4)	ಅರಕಲಗೂಡು	1.40
5)	ಅರಸೀಕೆರೆ	0.20
6)	ಸಕಲೇಶಪುರ	0.20

1	2	3
	ಚಿಕ್ಕಮಗಳೂರು ಜಿಲ್ಲೆ	
1)	ಚಿಕ್ಕಮಗಳೂರು	0.95
2)	ಕಡೂರು	0.70
3)	ಮೂಡಿಗೆರೆ	1.65
4)	ತರೀಕೆರೆ	5.00
5)	ನರಸಿಂಹರಾಜಪುರ	0.20
6)	ಕೊಪ್ಪ	0.20
	ದಕ್ಷಿಣ ಕನ್ನಡ ಜಿಲ್ಲೆ	
1)	ಬೆಳ್ತಂಗಡಿ	27.90
2)	ಬಂಟ್ವಾಳ	4.40
3)	ಮಂಗಳೂರು	23.25
4)	ಪುತ್ತೂರು	6.75
	ಕೊಡಗು ಜಿಲ್ಲೆ	
1)	ಮಡಕೇರಿ	2.00
2)	ಸೋಮವಾರಪೇಟೆ	6.40
3)	ವಿರಾಜಪೇಟೆ	2.25
	ಉಡುಪಿ	
1)	ಕಾರ್ಕಳ	16.60
2)	ಕುಂದಾಪುರ	7.20
3)	ಉಡುಪಿ	18.25